ಶಿರಾ ಬಾಲಕೀಯ ಪ್ರೌಢಶಾಲೆಯ ಕಟ್ಟಡ ಬಗ್ಗೆ

೧೭೨೨. ಶ್ರೀ ಸಿ. ಪಿ. ಮೂಡಲಗಿರಿಯಪ್ಪ (ಶಿರಾ).—ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿರಾ ಸಂತೆ ಪೇಟೆಯಲ್ಲಿ ಸರ್ಕಾರಿ ಬಾಲಕೀಯ ಪ್ರೌಢ ಶಾಲೆ ಕಟ್ಟಡವಿಲ್ಲ ಹಾಗೂ ಕನಿಷ್ಟ ಸೌಲಭ್ಯಗಳಿಲ್ಲದೆ ಗ್ಯಾರೇಜಿನಲ್ಲಿ ಸ್ಕೂಲಂ ನಡೆಯುತ್ತಿದ್ದು ವಿದ್ಯಾರ್ಥಿನಿಯರಿಗೆ ತೊಂದರೆಯಾಗಿರುವುದಂ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ತೊಂದರೆಗಳನ್ನು ನಿವಾರಿಸಲು ತೆಗೆದುಕೊಂಡ ಕ್ರಮವೇನು ?

ಶ್ರೀ ಎಂ. ಚಂದ್ರಶೇಖರ್ (ಲೋಕೋಪಯೋಗಿ ಮಂತ್ರಿಗಳು).—

ಅ) ಇಲ್ಲ.

ಆ) ಹಾಲಿ ಇರುವ ಕಟ್ಟಡದಲ್ಲಿ ಸೂಕ್ತ ಸ್ಥಳಾವಕಾಶ ಮಾಡಿಕೊಡಲಾಗಿದೆ.

ತುಂಗಾ ಏತ ನೀರಾವರಿ ಯೋಜನೆ

೧೯೬೫. ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಸಣ್ಣ ಮತ್ತು ಏತ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೭–೮೮ನೇ ಆಯವ್ಯಯದಲ್ಲಿ ತುಂಗಾ ಏತ ನೀರಾವರಿ ಕಾಮಗಾರಿಯನ್ನು ಸೇರಿಸಲಾಗಿದೆಯೇ ?

ಆ) ಹಾಗಿದ್ದಲ್ಲಿ ಸದರಿ ಏತ ನೀರಾವರಿಯಂ ಕಾಮಗಾರಿಯು ಯಾವ ಹಂತದಲ್ಲಿದೆ.

ಇ) ಸದರಿ ನೀರಾವರಿಯ ಅಂದಾಜು ವೆಚ್ಚದ ಶೇ. ೧೫ರಷ್ಟು ಹಣವನ್ನು ಮುಂಗಡವಾಗಿ ಠೇವಣಿ ಮಾಡಬೇಕೆಂಬುದು ನಿಜವೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಮತ್ತು ನೀರಾವರಿ ಮಂತ್ರಿಗಳು)—

ಅ) ಇಲ್ಲ, ತುಂಗಾ ಮೇಲ್ದಂಡೆ ಯೋಜನೆಗೆ ೨೫ ಲಕ್ಷ ರೂ.ಗಳ ಅನುದಾನ ಕೊಟ್ಟಿತ್ತು.

ಆ) ತುಂಗಾ ಮೇಲ್ದಂಡೆ ಯೋಜನೆಯು ಅನ್ವೇಷಣೆಯಲ್ಲಿದೆ.

ಇ) ಈ ಹಂತದಲ್ಲಿ ಉದ್ಭವಿಸುವುದಿಲ್ಲ.

ಪಂಚನಹಳ್ಳಿ, ಗ್ರಾಮಕ್ಕೆ ಪ್ರಥಮ ದರ್ಜೆ ಕಾಲೇಜಿನ ಬಗ್ಗೆ

೧೧೭೩. ಶ್ರೀ ಪಿ. ಬಿ. ಓಂಕಾರಮೂರ್ತಿ (ಕಡೂರು).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧. ೧೯೮೬–೮೭ನೇ ಸಾಲಿನಲ್ಲಿ ಕಡೂರು ತಾಲ್ಲೂಕಿನ ಪಂಚನಹಳ್ಳಿ ಗ್ರಾಮಕ್ಕೆ ಪ್ರಥಮ ದರ್ಜೆ ಕಾಲೇಜು ಮಂಜೂರು ಮಾಡಿದ್ದು ಕಳೆದ ವರ್ಷ ಮುಖ್ಯಮಂತ್ರಿಯವರು ಹೆಲಿಕ್ಯಾಪ್ಟರ್ ಕೆಟ್ಟು ತಂಗಿದ್ದಾಗ ಗ್ರಾಮಾಂತರ ಬಡವಿದ್ಯಾರ್ಥಿಗಳಿಗೆ ಅನುಕೂಲವಾಗಲಂ ಸದರಿ ಕಾಲೇಜನ್ನು ಪ್ರಾರಂಭಿಸುವುದಾಗಿ ಅಲ್ಲಿಯ ಜನತೆಗೆ ಭರವಸೆ ನೀಡಿರುವುದು ನಿಜವೆ ?

೨. ಹಾಗಿದ್ದಲ್ಲಿ, ಈ ಕಾಲೇಜನ್ನು ಪ್ರಾರಂಭಿಸಲು ಸರ್ಕಾರವು ಕೈಗೊಂಡ ಕ್ರಮಂಗಳೇನು ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಸಚಿವರು),—

೧, ಮುಂದಿನ ವರ್ಷ ಪರಿಶೀಲಿಸುವ ಭರವಸೆ ನೀಡಿದರು.